ಶ್ರೀ ಪಿ. ಎಂ. ಬಂಗಿ.—ಮುಧೋಳ್, ಜಮಖಂಡಿ, ರೋಣ ಮುಂತಾದ ಸಂಸ್ಥಾನಗಳ ಪೆನ್ಷನ್ ಹೊಂದಿದ ಶಿಕ್ಷಕರು ಎಷ್ಟು? ಆ ಬಗ್ಗೆ ಪರಿಶೀಲನೆ ಮಾಡಿದ್ದೀರಾ ಹೇಗೆ? ಮತ್ತು ಅವರ ಅಪ್ಲಿಕೇಷನ್ಸ್ ನಾಲ್ಕು ವರ್ಷವಾದರೂ ಇನ್ನೂ ಹಾಗೆಯೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೋ ಹೇಗೆ?

†ಶ್ರೀ ಎ. ಆರ್. ಬದರಿನಾರಾಯಣ್.—ಎಷ್ಟು ಜನರಿದ್ದಾರೆ ಎನ್ನುವ ಅಂಕಿ ನನ್ನ ಹತ್ತಿರ ಇಲ್ಲ. ಕೆಲವು ಸಂದರ್ಭಗಳಲ್ಲಿ ನಿಧಾನವಾಗಿರುವುದಕ್ಕೆ ಕಾರಣವೇನೆಂದರೆ ಪ್ರಾವಿಡೆಂಟ್ ಫಂಡ್ ಹಣವನ್ನು ಹಿಂದಿನ ಡಿಸ್ಟ್ರಿಕ್ಟ್ ಸ್ಕೂರ್ ಬೋರ್ಡ್ಸ್‌ನವರು ಕೊಡಬೇಕು. ಅವರು ಕೊಡುವವರೆಗೂ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಪಿ. ಎಂ. ಬಂಗಿ.—ಸುಮಾರು ನಾಲ್ಕು ವರ್ಷವಾಯಿತು. ಇನ್ನೂವರೆಗೆ ತೀರ್ಮಾನವಾಗದೆ ಇರುವುದರಿಂದ ಅವರ ಮೇಂಟೆನೆನ್ಸ್ ಪ್ರಶ್ನೆ ಬಹಳ ಕಠಿಣವಾಗಿದೆ. ಆದುದರಿಂದ ತಾವು ಕೂಡಲೇ ಅವರ ಪೆನ್ಷನ್ ಫಿಕ್ಸ್ ಮಾಡಿ ಅವರಿಗೆ ಪೆನ್ಷನ್ ಕೊಡುತ್ತೀರೋ ಹೇಗೆ? ಮತ್ತು ಅಲ್ಲಿಯವರೆಗೂ ಅಡಹಾಕ್ ಪೇಮೆಂಟ್ ಏನಾದರೂ ಕೊಡುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ್.—ಡಿಸ್ಟ್ರಿಕ್ಟ್ ಸ್ಕೂರ್ ಬೋರ್ಡ್‌ನಿಂದ ಬರಬೇಕಾದ್ದು ಬರದೆ ಇರುವುದರಿಂದ ನಿಧಾನವಾಗಿದೆ. ಅದನ್ನು ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ. ಎಂ. ಬಂಗಿ.—ತಾವು ಅವರಿಗೆ ಏನಾದರೂ ಅಡ್ವಾನ್ಸ್ ಪೇಮೆಂಟ್ ಮಾಡುತ್ತೀರಾ?

(*No answer*)

Temporary ban on Developmental Works

443. **Sri S. KARIYAPPA** (Kanakapura).—

Will the Minister for Finance be pleased to state :—

(*a*) whether there is a ban on taking up the developmental works by Government in the State ;

(*b*) if so, the probable period it may take for lifting the ban ?

Sri M. Y. GHORPADE (Minister for Finance).—

(*a*) and (*b*) There was a ban on taking up new works as per the G. Os. issued on 11th February 1972 and 1st March 1972. However, the position has now been reviewed and orders have since been issued relaxing the ban imposed on new works.

ಶ್ರೀ ಎಚ್. ಪುಟ್ಟಸ್ವಾಮಿ.—ಸ್ವಾಮಿ, ಈ ನಿಷೇಧವನ್ನು ಸಡಿಲಗೊಳಿಸಲಾಗಿದೆ ಎಂದು ಹೇಳಿದ್ದೀರಿ. ಯಾವ ಯಾವ ಕಾಮಗಾರಿಗಳ ಬಗ್ಗೆ ನಿಷೇಧಾಜ್ಞೆಯನ್ನು ಸಡಿಲಗೊಳಿಸಲಾಗಿದೆ ಎನ್ನುವ ವಿವರ ಕೊಡುತ್ತೀರಾ?

†ಶ್ರೀ ಎಂ. ವೈ. ಘೋರ್ಪಡೆ.—ಎಲ್ಲಾ ಕೆಲಸಗಳ ಬಗ್ಗೆ ಈ ನಿಷೇಧಾಜ್ಞೆಯನ್ನು ತೆಗೆದಿದ್ದಾರೆ. ಬಜೆಟ್ಟಿನಲ್ಲಿ ಪ್ರೊವೈಡ್ ಆಗಿರತಕ್ಕ ಎಲ್ಲಾ ಕೆಲಸಗಳ ಬಗ್ಗೆ ಯಾವ ಒಂದು ಆತಂಕವೂ ಇಲ್ಲ. ಒಂದು ಲಕ್ಷಕ್ಕಿಂತ ಹೆಚ್ಚಾಗಿದ್ದರೆ, ಸರ್ಕಾರದಿಂದ ಸ್ಯಾಂಕ್ಷನ್ ಆಗ ಬೇಕಾಗುತ್ತದೆ. ಬಜೆಟ್ ಲಿಮಿಟೇಷನ್ ಒಳಗೆ ಒಂದು ಲಕ್ಷಕ್ಕೆ ಕಡಿಮೆ ಇದ್ದರೆ, ಸಾಧ್ಯವಾದ ಮಟ್ಟಿಗೆ ಇದೇ ವರ್ಷ ಪೂರೈಸುವ ದೃಷ್ಟಿಯಿಂದ ಇದನ್ನು ಖರ್ಚುಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಒಂದು ಲಕ್ಷಕ್ಕೆ ಜಾಸ್ತಿ ಇರಲಿ, ಕಡಿಮೆ ಇರಲಿ, ಬಜೆಟ್ಟಿನಲ್ಲಿ ಏನು ಏನು ಪ್ರೊವೈಡ್ ಆಗಿದೆ, ಅದನ್ನು ಖರ್ಚು ಮಾಡುವುದರಲ್ಲಿ ಯಾವ ಒಂದು ತೊಂದರೆಯೂ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಯಾವುದರ ಮೇಲೂ ನಿರ್ಬಂಧ ಇಲ್ಲ ಎಂದು ಹೇಳಿ ಅಪ್ಪಣೆಕೊಡಿಸಿದ್ದೀರಿ. ಬಹಳ ಸಂತೋಷ, ತಮಗೆ ನನ್ನ ಶುಭಾಶಯಗಳು. ಇನ್ನು ಮುಂದೆ ಯಾವುದೇ ಇಲಾಖೆಯ ಕೆಲಸಕಾರ್ಯಗಳಿಗೆ ಅನಾವಶ್ಯಕವಾದ ಅಡ್ಡಿಗಳನ್ನು ಒಡ್ಡದೆ ಆದಷ್ಟು ಜಾಗ್ರತೆ ಮಂಜೂರಾತಿಯನ್ನು ತಮ್ಮ ಡಿಪಾರ್ಟ್‌ಮೆಂಟಿನಿಂದ ಕೊಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಎಕಾನಮಿ ಮೆಜರ್ಸ್ ನಮ್ಮ ಸರ್ಕಾರ ಮಾಡಿದ್ದು ಅಲ್ಲ. ಗವರ್ನರ್ ರೂಲ್ ಇದ್ದಾಗ, ಪ್ರತಿಯೊಂದು ಕೆಲಸವನ್ನು ಸಂಪೂರ್ಣವಾಗಿ ನಿಲ್ಲಿಸಿದ್ದಕ್ಕೆ ಕಾರಣ, ಆಗ ಬಿಕ್ಕಟ್ಟಿನ ಹಣಕಾಸಿನ ಪರಿಸ್ಥಿತಿ ಬಂದಿದ್ದರಿಂದ, ಎಲ್ಲಾ ಕೆಲಸಗಳನ್ನು ನಿಲ್ಲಿಸಿಬಿಟ್ಟರು. ಆದರೆ ಹೊಸ ಸರ್ಕಾರ ಬಂದನಂತರ ಈ ನಿರ್ಬಂಧವನ್ನು ಸಂಪೂರ್ಣವಾಗಿ ತೆಗೆದು ಹಾಕಿದ್ದೇವೆ. ಒಂದು ಲಕ್ಷ ರೂಪಾಯಿನ ದೊಡ್ಡ ದೊಡ್ಡ ಕೆಲಸಗಳು ಏನು ಇವೆ, ಅವುಗಳಿಗೆ ಪುನಃ ಸರ್ಕಾರದ ಸ್ಯಾಂಕ್ಷನ್ ಪಡೆಯಬೇಕು. ಇದು ಏತಕ್ಕೆ ಎಂದರೆ, ಹೊಸ ಸರ್ಕಾರದ ಗಮನಕ್ಕೆ ಈ ಕೆಲಸ ಕಾರ್ಯಗಳು ಬರಲಿ ಎನ್ನುವ ಉದ್ದೇಶದಿಂದ ಈ ರೀತಿ ಮಾಡಿದೆಯೇ ಹೊರತು ಕೆಲಸಗಳನ್ನು ತಡಮಾಡುವ ದೃಷ್ಟಿಯಿಂದ ಅಡ್ಡಿ ಆತಂಕ ಮಾಡುವ ದೃಷ್ಟಿಯಿಂದ ಅಲ್ಲ. ಒಂದು ಲಕ್ಷಕ್ಕೆ ಕಡಿಮೆ ಇರುವ ಕೆಲಸಗಳಿಗೆ ಬಡ್ಜೆಟ್ಟಿನ ಲಿಮಿಟ್ ಪ್ರಕಾರ ಖರ್ಚು ಮಾಡುವುದರಲ್ಲಿ ಯಾವ ತೊಂದರೆಯೂ ಇಲ್ಲ. ಆದಷ್ಟು ಮಾಟ್ಟಿಗೆ ಇದೇ ವರ್ಷ ಈ ಕೆಲಸಗಳನ್ನು ಪೂರೈಸುವ ಪ್ರಯತ್ನ ಮಾಡಬೇಕು ಎಂದು ಅಧಿಕಾರಿಗಳಿಗೆ ಹೇಳಿದ್ದೇವೆ. ಇದರ ಬಗ್ಗೆ ಸ್ಪಷ್ಟವಾದ ಆರ್ಡರ್ ಎಲ್ಲಾ ಕಡೆ ಕಳುಹಿಸಿದ್ದೇವೆ. ಆದರೂ ಕೂಡ ಈ ಭಾವನೆ ಏತಕ್ಕೆ ಬಂತು ಎಂದು ಅರ್ಥವಾಗುವುದಿಲ್ಲ. ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಎಲ್ಲಾ ಕೆಲಸಗಳನ್ನು ನಡೆಸಲಿಕ್ಕೆ ತಯಾರಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಗವರ್ನರ್ ಆಡಳಿತದಲ್ಲಿ ಈ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆಳ್ಳುವಲ್ಲಿ ತಕ್ಷಣ ನಿಷೇಧಾಜ್ಞೆಯನ್ನು ಜಾರಿಗೆ ತಂದರು, ಹೀಗೆ ತರುವಲ್ಲಿ ಮೂಲ ಕಾರಣಗಳು ಏನು ? ಇದು ಜಾರಿಯಲ್ಲಿದ್ದಾಗ ಜನಗಳಿಗೆ ಮತ್ತು ರಾಜ್ಯಕ್ಕೆ ಆಗಿರುವ ನಷ್ಟ ಎಷ್ಟು ? ತಡೆ ಆಜ್ಞೆಯನ್ನು ಮಾಡಲು ಅವರು ಕೊಟ್ಟಂಥ ಕಾರಣ ಗಳನ್ನು ರಾಜ್ಯ ಸರ್ಕಾರ ನಿವಾರಣೆ ಮಾಡಿದೆಯೇ ?

ಶ್ರೀ ಎಂ. ವೈ. ಘೋರ್ಪಡೆ.—ನಾನು ಹೇಗೆ ಉತ್ತರ ಹೇಳಲಿಕ್ಕೆ ಸಾಧ್ಯ ? ಹಣಕಾಸಿನ ವ್ಯವಸ್ಥೆ ಸಾಕಷ್ಟು ಹತೋಟಿಯಲ್ಲಿರಲಿಲ್ಲ, ಇಂಥ ನೂಕ್ಷ್ಮ ಪರಿಸ್ಥಿತಿ ರಾಜ್ಯ ಸರ್ಕಾರಕ್ಕೆ ಒದಗಿದ್ದ ಕಾರಣದಿಂದ ಎಲ್ಲಾ ಕೆಲಸಗಳನ್ನು ನಿಲ್ಲಿಸಿದ್ದು.

I take this opportunity of reading this order :

"The position has now been reviewed and the following clarifications are issued in this regard :

(1) In respect of works where administrative approval has already been accorded, but the work has not yet been taken up for execution, the officers of the Public Works Department should review the need for taking up these works and obtain specific orders of Government. In case specific budget provision has been made in respect of works costing over Rs. 1 lakh, Government will consider favourably relaxation of the economy orders in respect of priority works.

(2) In respect of original works costing Rs. 1 lakh and less, Government may consider relaxation of the economy orders only in case the Heads of Departments are in a position to restrict the outlay on such works to the available budget provision without asking for additional grants and provided that the works can be completed before the close of the financial year without any spill-over into the following year."

ಇದು ಒಂದೇ ನಿರ್ಬಂಧ.

ಶ್ರೀ ಎಂ. ಎಸ್. ಕೃಷ್ಣನ್.—ಎಕಾನಮಿ ಮೆಜರ್ಸ್ ಏನು ಇದೆ, ಇದನ್ನು ತಾವು ತೆಗೆದು ಹಾಕಿರುವುದು ಸಂತೋಷ. ಅದೇ ಸಮಯಕ್ಕೆ ಒಂದು ಲಕ್ಷಕ್ಕಿಂತ ಜಾಸ್ತಿ ಕೆಲಸಗಳು ಆದರೆ, ಸರ್ಕಾರದ ಗಮನಕ್ಕೆ ಬರಬೇಕು ಮತ್ತು ಸರ್ಕಾರದ ಸ್ಯಾಂಕ್ಷನ್ ಪಡೆಯಬೇಕು ಎಂದು ಹೇಳಿದ್ದೀರಿ. ಈ ಕೆಲಸಗಳನ್ನು ಎಷ್ಟು ಬೇಗ ಮಾಡಬೇಕು. ಇಷ್ಟೇ ಕಾಲದಲ್ಲಿ ಮಾಡಬೇಕು ಎಂದು ಒಂದು ನಿರ್ದಿಷ್ಟವಾದ ಆದೇಶವನ್ನು ಕೊಡುವುದಕ್ಕೆ ಸಾಧ್ಯವೆ ?

Sri M. Y. GHORPADE.—I can say that most of the works are in the P.W.D. and our P.W.D. Minister is very anxious to complete all those works and take up new works. I have no doubt that he comes to us for sanction when something has to be provided in the budget. It receives immediate attention and is sanctioned. I am quite confident there is no delay. The only object is that big amounts should be brought to the notice of the new Government because in the old days they have sanctioned without making any additional provision ; for a particular work full provision was not made. Therefore, Government is entitled to review these matters. Only in occasional cases where the work costing more than Rs. 1 lakh may not be considered so essential, then the Government has power not to take up such works. This has not happened. Most of the time it has been sanctioned. The Hon'ble Minister is very anxious to expedite them. There is no such fear.

ಶ್ರೀ ಎಚ್. ಡಿ. ದೇವೇಗೌಡ.—ಅರ್ಥ ಮಂತ್ರಿಗಳು ವಿವರಣೆ ಕೊಟ್ಟಿದ್ದರಲ್ಲಿ, ಈ ಕೆಲಸಗಳ ಬಗ್ಗೆ ಹೊಸ ಸರ್ಕಾರಕ್ಕೆ ಅರಿವು ಇರಬೇಕು ಎನ್ನುವ ದೃಷ್ಟಿಯಿಂದ ಒಂದು ಲಕ್ಷಕ್ಕೆ ಮೇಲ್ಪಟ್ಟು ಇರುವ ಕೆಲಸಗಳು ಸರ್ಕಾರದ ಗಮನಕ್ಕೆ ಬರಬೇಕು ಎಂದು ಇದೆ. ಆಯಾ ಇಲಾಖೆಯ ಮುಖ್ಯ ಅಧಿಕಾರಿಗಳಿಗೆ ಕೆಲವು ಫಿನಾನ್ಷಿಯರ್ ಪವರ್ಸ್ ಕೊಟ್ಟಿದ್ದೀರಿ, ಅರ್ಥ ಇಲಾಖೆಯವರು ಏನು ಮಾಡಿದ್ದಾರೆ ಎಂದರೆ, ಕೆಲವು ಅಧಿಕಾರಿಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವ ಉದ್ದೇಶದಿಂದ ಇಲಾಖೆಯ ಅಧಿಕಾರಿಗಳಿಗೆ ಫಿನಾನ್ಷಿಯರ್ ಪವರ್ಸ್ ಅನ್ನು ಕೊಟ್ಟಿದರು. ಲಿಮಿಟೆಡ್ ಎಸ್ಟಿಮೇಟ್ ಬಂದರೂ ಅದನ್ನು ಮಂಜೂರು ಮಾಡುವುದಕ್ಕೆ ಬಿಟ್ಟಿಲ್ಲ. ಈ ಪದ್ಧತಿ ಹಿಂದಿನ ಸರ್ಕಾರದಿಂದಲೂ ನಡೆದುಕೊಂಡು ಬಂದಿದೆ. ಚೆಕ್ಕಿಕರ್ ಫೀಸಿಬಿಲಿಟಿ ಇದ್ದಾಗ, ಅಂದಾಜು ಪರಿಮಿತಿಯೊಳಗೆ ಸರ್ಕಾರಕ್ಕೆ ಬಾರದೆ ಇದ್ದರೂ ನಿರ್ದೇಶನ ಕೊಡುವುದು ಸೂಕ್ತವಲ್ಲವೇ ? ಈ ರೀತಿ ಮಾಡುವುದರಿಂದ ಕಾಲ ವಿಳಂಬವಾಗುವುದನ್ನು ತಡೆಗಟ್ಟುವುದಕ್ಕಾಗುತ್ತದೆಯೇ ?

ಶ್ರೀ ಎಂ. ವೈ. ಘೋರ್ಪಡೆ.—ಪ್ರತಿಯೊಂದು ಕೆಲಸಗಳಿಗೂ ಪುನಃ ಫೈನಾನ್ಸ್ ಡಿಪಾರ್ಟ್‌ಮೆಂಟಿನ ಸ್ಯಾಂಕ್ಷನ್ ಪಡೆಯುವ ಆವಶ್ಯಕವಿಲ್ಲ. ನಾವು ಅದನ್ನು ಇನ್‌ಸಿಸ್ಟ್ ಕೂಡ ಮಾಡುತ್ತಾ ಇಲ್ಲ. ಸಂಬಂಧಪಟ್ಟ ಡಿಪಾರ್ಟ್‌ಮೆಂಟ್ ಸ್ಯಾಂಕ್ಷನ್ ಮಾಡುತ್ತದೆ ಎಂದು ರೂಲ್ಸ್ ಇದೆ. ಅದಕ್ಕೆ ಒಂದು ಲಿಮಿಟ್ ಇದೆ, ಅಷ್ಟು ಲಿಮಿಟ್ ಒಳಗೆ ಇದ್ದರೆ ಅಧಿಕಾರಸ್ಥರು ಮಂಜೂರು ಮಾಡಬೇಕು ; ಅದಕ್ಕಿಂತ ಜಾಸ್ತಿಯಾದರೆ, ಫೈನಾನ್ಸ್ ಡಿಪಾರ್ಟ್‌ಮೆಂಟಿನ ಸ್ಯಾಂಕ್ಷನ್‌ಗೋಸ್ಕರ ಬರಬೇಕು.

Every small work does not come to the Finance Department. It is controlled by the Minister concerned as per the departmental rules already in existence.

Sri H. M. CHANNABASAPPA.—We are now at a time when non-essential works may stay for some time and essential works must be put through. It is only just as a safeguard that the departmental officers may go ahead in the exercise of their powers to spend monies on non-essential works, Government will just look into them. If there are more essential things, Government would always like to see that the essential works are put through. It is only as a measure of control that this has been done.

Sri H. D. DEVE GOWDA.—While taking a decision whether it is essential or non-essential, will political considerations crop up ?

Sri M. Y. GHORPADE.—Take for instance, various roads. Is not the Minister entitled to call all the officers to decide which are all the roads on the anvil, which should receive priority, and which should be taken up first, and which second? This sort of control should be exercised by the concerned Department.

Sri H. M. CHANNABASAPPA.—Sri Deve Gowda will appreciate the point when I say that suppossing there is an estimate for Rs. 10,000 for asphalting a road or for straightening a road. It is absolutely essential to give communications to rural people. As between that and straightening a road at a cost of Rs. 2 lakhs, I am sure he will agree that rural roads must have preference. It is for that safeguard this procedure is adopted.

Sri M. Y. GHORPADE.—I am anxious that all the departments should exert to fully utilise whatever amounts have been provided in the budget so that the actual expenditure does not fall short of budgeted amounts.

Sri S. H. SIDDAPPA.—So, at the top level you will not have political consideration while the officers at the bottom will have political consideration. Why not you list essential and non-essential items and give them some guidelines ?

Sri M. Y. GHORPADE.—Is the hon. Member trying to suggest that when the officers at the district level take decisions thay are not political and that when they are reviewed at higher level they are automatically political ?

Filling up of the Vacant Posts of D. D. P. Is.

496. Sri B. B. SAYANAK (Belgaum).—

Will the Minister for Education be pleased to state :—

(*a*) the number of posts of Deputy Directors of Public Instruction that are vacant in the State ;

(*b*) since when these posts are vacant and the reasons for the same ;

(*c*) when the Government intend to fill up these posts ?

Sri A. R. BADARINARAYANA (Minister for Education).—

(*a*) 26.

(*b*) (i) *Vide* Statement appended.